


بسم اللهِ الرّحمٰن الرّحيم

# ಜಲ್ಸ ಸಾಲಾನ ಯು.ಕೆ – ದೈವಿಕ ಅನುಗ್ರಹಗಳ ಸುರಿಮಳೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **01–08–2025** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಝ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಕಳೆದ ಭಾನುವಾರ, ಅಲ್ಲಾಹನ ಕೃಪೆಯಿಂದ, ಜಲ್ಸ ಸಾಲಾನ ಯು.ಕೆ. ಯಶಸ್ವಿಯಾಗಿ ಮುಕ್ತಾಯಗೊಂಡಿತು. ಈ ಮೂರು ದಿನಗಳಲ್ಲಿ ಅಪಾರ ಅನುಗ್ರಹಗಳು ಮತ್ತು ದೈವಿಕ ಕೃಪೆಗಳು ಪ್ರಕಟಗೊಂಡುವು. ಅಲ್ಲಾಹನು ನಮಗೆ ಈ ಮೂರು ದಿನಗಳಲ್ಲಿ ಅಸಂಖ್ಯಾತ ವರದಾನಗಳನ್ನು ದಯಪಾಲಿಸಿದನು ಮತ್ತು ಜಲ್ಸವನ್ನು ಎಲ್ಲ ರೀತಿಯಲ್ಲೂ ಅನುಗ್ರಹಿಸಿದನು. ಹೀಗೆ ಜಲ್ಸ ಅತ್ಯುತ್ತಮವಾಗಿ ಸಮಾಪ್ತಗೊಂಡಿತು. ಅಲ್ಲಾಹನ ಕೃಪೆಯಿಂದ ಹವಾಮಾನವೂ ಉತ್ತಮವಾಗಿತ್ತು ಮತ್ತು ಎಲ್ಲ ಕಾರ್ಯಕ್ರಮಗಳು ಸುಲಲಿತವಾಗಿ ಮುಕ್ತಾಯಗೊಂಡವು. ಜಲ್ಸದ ಮುಖ್ಯ ಕಾರ್ಯಕ್ರಮಗಳಾದ ಭಾಷಣಗಳು ಮತ್ತು ಇತರ ಕಾರ್ಯಕ್ರಮಗಳಲ್ಲದೆ, ವಿವಿಧ ವಿಭಾಗಗಳು ಆಯೋಜಿಸಿದ್ದ ತಬ್ಲೀಗಿನ ಮತ್ತು ಜ್ಞಾನದಾಯಕ ಪ್ರದರ್ಶನಗಳು ಅಲ್ಲಾಹನ ಕೃಪೆಯಿಂದ ಅಹ್ಮದಿಯೇತರರ ಮೇಲೂ ಉತ್ತಮ ಪ್ರಭಾವ ಬೀರಿದವು, ಅನೇಕ ಅಹ್ಮದಿಯರಿಗೂ ತಮ್ಮ ಅರಿವನ್ನು ವರ್ಧಿಸಲು ಸೌಭಾಗ್ಯ ಲಭಿಸಿತು.

ಅದೇ ರೀತಿ, ಎಂ.ಟಿ.ಎ. ಕೂಡ ಜಲ್ಸದ ನಡುವಿನ ವಿರಾಮಗಳಲ್ಲಿ ವಿವಿಧ ಕಾರ್ಯಕ್ರಮಗಳನ್ನು ಪ್ರಸಾರ ಮಾಡಿತು ಮತ್ತು ಅರಿವು ನೀಡಿತು. ಇದು ಜನರ ಮೇಲೆ ಉತ್ತಮ ಪ್ರಭಾವ ಬೀರಿತು. ಬೇರೆ ದೇಶಗಳಲ್ಲಿರುವ ಅಹ್ಮದಿಯರಿಗೂ ಅನೇಕ ಹೊಸ ವಿಷಯಗಳು ಗೊತ್ತಾದ ಕಾರಣದಿಂದ ಅದನ್ನು ಬಹಳವಾಗಿ ಇಷ್ಟಪಟ್ಟರು. ಎಂ.ಟಿ.ಎ. ಈ ಬಾರಿ ಲೋಕದ ಸುಮಾರು 56 ದೇಶಗಳ 119 ಕೇಂದ್ರಗಳೊಂದಿಗೆ ಜಲ್ಸವನ್ನು ಜೋಡಿಸಿತು. ಈ ಸಂಪರ್ಕದ ಮೂಲಕ ಅವರಿಗೆ ಸ್ವತಃ ಜಲ್ಸದಲ್ಲಿ ಹಾಜರಿದ್ದೇವೆ ಎಂಬ ಭಾವನೆ ಹುಟ್ಟಿಸುವ ರೀತಿಯಲ್ಲಿ ಜಲ್ಸವನ್ನು ಆಲಿಸಲು ಅಲ್ಲಾಹನು ಸೌಭಾಗ್ಯ ನೀಡಿದನು. ಇದು ಅಲ್ಲಾಹನು ಅಹ್ಮದಿಯಾ ಜಮಾಅತಿನ ಮೇಲೆ ಮಾಡಿದ ಮಹತ್ತಾದ ಅನುಗ್ರಹಗಳಲ್ಲಿ ಒಂದಾಗಿದೆ. ಈ ಹೊಸ ಆವಿಷ್ಕಾರಗಳು ಇಡೀ ಲೋಕದ ಅಹ್ಮದಿಯರನ್ನು ಒಗ್ಗೂಡಿಸಿದೆ. **ಉಮ್ಮತೇ ವಾಹಿದ** (ಒಂದೇ ಸಮುದಾಯ) ಆಗುವ ಈ ದೃಶ್ಯವು ವಿಶ್ವದಲ್ಲಿ ಬೇರೆಲ್ಲಿಯೂ ಕಂಡುಬರುವುದಿಲ್ಲ.

ಈ ಬಾರಿ ಸಾಮಾನ್ಯವಾಗಿ, ಏರ್ಪಾಡುಗಳು ಹಿಂದಿನ ವರ್ಷಗಳಿಗಿಂತ ಉತ್ತಮವಾಗಿದ್ದುವು ಎಂದು ಅನೇಕರು ಹೇಳಿದರು. ಜಲ್ಸದಲ್ಲಿ ಭಾಗವಹಿಸಿದವರು ಮತ್ತು ವಿವಿಧ ದೇಶಗಳಲ್ಲಿ ಟಿ.ವಿ ಮೂಲಕ ಕಾರ್ಯಕ್ರಮಗಳನ್ನು ವೀಕ್ಷಿಸಿದವರು ಕೂಡ ಇದನ್ನು ವ್ಯಕ್ತಪಡಿಸಿರುವರು. ಒಂದು ವಿಶೇಷ ವಾತಾವರಣವಾಗಿತ್ತು ಮತ್ತು ಇದು ಅಲ್ಲಾಹನ ವಿಶೇಷ ಅನುಗ್ರಹವಾಗಿದೆ. ಜಲ್ಸದಲ್ಲಿ ಅಲ್ಲಾಹನ ವಿಶೇಷ ಅನುಗ್ರಹಗಳು ಇಳಿಯುತ್ತಿವೆ ಎಂದು ಪ್ರತಿಯೊಬ್ಬರಿಗೂ ಅಸಾಧಾರಣ ರೀತಿಯಲ್ಲಿ ಅನುಭವವಾಗುತ್ತಿತ್ತು.

ಅಲ್ಲಾಹನು ಹೇಳುತ್ತಾನೆ: 'ನೀವು ಅವನಿಗೆ ಕೃತಜ್ಞರಾಗಿರಿ, ನೀವು ಕೃತಜ್ಞತೆ ತೋರಿಸಿದರೆ, ನಾನು ನಿಮ್ಮ ಮೇಲೆ ನನ್ನ ಅನುಗ್ರಹಗಳನ್ನು ಮತ್ತಷ್ಟು ದಯಪಾಲಿಸುತ್ತೇನೆ.' ಆದ್ದರಿಂದ, ಅಲ್ಲಾಹನ ಹೆಚ್ಚಿನ ಅನುಗ್ರಹಗಳಿಗೆ ಪಾತ್ರರಾಗಲು ಕೃತಜ್ಞತೆ ತೋರಿಸಬೇಕು. ನಿಶ್ಚಯವಾಗಿ ಅಲ್ಲಾಹನು ಕೃತಜ್ಞತೆಗೆ ಬೆಲೆಕೊಡುವವನು ಮತ್ತು ತಿಳಿದಿರುವವನು ಎಂದು ಅಲ್ಲಾಹನು ತನ್ನ ಬಗ್ಗೆ ಹೇಳಿದ್ದಾನೆ. ಅಲ್ಲಾಹನಿಗೆ ಸಂಬಂಧಿಸಿ ಕೃತಜ್ಞತೆಯ ಪದ ಬಳಸಲ್ಪಡುವಾಗ, ಅದು ಪರಿಗಣಿಸು ಎಂಬ ಅರ್ಥದಲ್ಲಿ ಬಳಸಲ್ಪಡುತ್ತದೆ. ಅಲ್ಲಾಹನು ಕೃತಜ್ಞತೆ ತೋರಿಸುವವರನ್ನು ಗೌರವಿಸುತ್ತಾನೆ. ಈ ಪರಿಗಣನೆಯ ಪರಿಣಾಮವಾಗಿ, ಅಲ್ಲಾಹನು ಅವರಿಗೆ ಮತ್ತಷ್ಟು ಅನುಗ್ರಹಗಳನ್ನು ನೀಡುತ್ತಾನೆ. ಇದು ಕೇವಲ ಬಾಯಿಮಾತು ಆಗಿರಬಾರದು, ಬದಲಿಗೆ ಕೃತಜ್ಞತೆಯ ಭಾವನೆ ಇರಬೇಕು. ಅಲ್ಲಾಹನು ತನ್ನ ಕೃಪೆಯಿಂದ ಜಮಾಅತಿನಲ್ಲಿ ಈ ಭಾವನೆಯನ್ನು ಬಹಳವಾಗಿ ಬೆಳೆಸಿದ್ದಾನೆ, ಅಲ್ಲಾಹನು ಇದನ್ನು ಹೆಚ್ಚಿಸುತ್ತಲೇ ಇರಲಿ.

ಭಾಗವಹಿಸಿದವರೆಲ್ಲರೂ ಅಲ್ಲಾಹನಿಗೆ ಕೃತಜ್ಞತೆ ಸಲ್ಲಿಸುವುದರೊಂದಿಗೆ ಡ್ಯೂಟಿಯಲ್ಲಿದ್ದ ಕಾರ್ಯಕರ್ತರಿಗೂ ಕೃತಜ್ಞತೆ ಸಲ್ಲಿಸಬೇಕು ಎಂಬುದನ್ನು ಕೂಡ ನೆನಪಿನಲ್ಲಿಡಬೇಕು. ಅಲ್ಲಾಹನು ಡ್ಯೂಟಿಯಲ್ಲಿದ್ದವರ ಕೆಲಸಗಳನ್ನು ಸುಲಭಗೊಳಿಸಿದನು, ಅವರ ತೊಂದರೆಗಳನ್ನು ನಿವಾರಿಸಿದನು, ಅವರ ಪ್ರತಿ ಕೆಲಸದಲ್ಲಿ ಸುಧಾರಣೆ ತಂದನು ಮತ್ತು ಅವರಿಗೆ ಹೆಚ್ಚು ಹೆಚ್ಚು ಜನರ ಸೇವೆ ಮಾಡಲು ಸೌಭಾಗ್ಯ ನೀಡಿದನು ಮತ್ತು ಈ ಮೂಲಕ ಭಾಗವಹಿಸಿದವರಿಗೆ ಉತ್ತಮ ಸೌಲಭ್ಯಗಳು ಲಭ್ಯವಾದವು ಎಂಬುದಕ್ಕೆ ಕೃತಜ್ಞತೆ ಸಲ್ಲಿಸಬೇಕು.

ಈ ವರ್ಷ ಅಲ್ಲಾಹನ ಕೃಪೆಯಿಂದ 50 ಸಾವಿರ ಜನರ ಹಾಜರಾತಿಯಿತ್ತು. ಅಲ್ಲಾಹನು ಸೇವಕರ ಮೂಲಕ ಅವರಿಗೆ ಸೌಲಭ್ಯಗಳನ್ನು ಮಾಡಿಕೊಟ್ಟನು, ಅವರಿಗೆ ಸಾರಿಗೆ, ಊಟ ಮತ್ತು ಜಲ್ಸದ ಕಾರ್ಯಕ್ರಮಗಳನ್ನು ಕೇಳುವ ವಿಷಯಗಳಲ್ಲಿ ಯಾವುದೇ ತೊಂದರೆಯಾಗಲಿಲ್ಲ ಮತ್ತು ಅವರ ಇತರ ವಿವಿಧ ಅಗತ್ಯಗಳು ಪೂರೈಸಲ್ಪಟ್ಟವು ಎಂಬುದಕ್ಕೆ ಭಾಗವಹಿಸಿದ ಈ 50 ಸಾವಿರ ಜನರು

ಕೃತಜ್ಞರಾಗಿರಬೇಕು. ಅಲ್ಲಾಹನ ಕೃಪೆಯಿಂದ ನಡೆದ ಈ ಎಲ್ಲ ಕೆಲಸಗಳಲ್ಲಿ ನಮ್ಮದೇನೂ ಶ್ರೇಷ್ಠತೆ ಅಥವಾ ನಿಪುಣತೆಯಿಲ್ಲ, ಬದಲಿಗೆ ಇದು ಅಲ್ಲಾಹನ ಅನುಗ್ರಹವಾಗಿದೆ. ಸೇವೆ ಮಾಡಲಿಕ್ಕೆ ಅಲ್ಲಾಹನು ಸೌಭಾಗ್ಯ ನೀಡಿದಕ್ಕೆ ಮತ್ತು ಸೇವೆಗಳಿಗೆ ಉತ್ತಮ ಫಲಿತಾಂಶಗಳನ್ನು ನೀಡಿದಕ್ಕೆ ಡ್ಯೂಟಿ ಮಾಡಿದವರು ಅಲ್ಲಾಹನಿಗೆ ಕೃತಜ್ಞತೆ ಸಲ್ಲಿಸಬೇಕು. ಅದೇ ರೀತಿಯಲ್ಲಿ ಸೌಲಭ್ಯಗಳನ್ನು ಒದಗಿಸಿದಕ್ಕೆ ಭಾಗವಹಿಸಿದವರು ಸಹ ಕೃತಜ್ಞತೆ ಅರ್ಪಿಸಬೇಕು. ವಿವಿಧ ವರ್ಗಗಳ ಮತ್ತು ವಿವಿಧ ಶೈಕ್ಷಣಿಕ ಹಿನ್ನೆಲೆ ಇರುವ ಅಸಂಖ್ಯಾತ ಜನರು ಹಗಲು ರಾತ್ರಿ ಅಲ್ಲಾಹನ ಸಂಪ್ರೀತಿಗಾಗಿ ಸ್ವತಃ ಡ್ಯೂಟಿ  ನಿರ್ವಹಿಸಿದರು. ಕೆನಡಾ ಮತ್ತು ಆಸ್ಟ್ರೇಲಿಯಾದಿಂದಲೂ ಹೆಚ್ಚಿನ ಸಂಖ್ಯೆಯಲ್ಲಿ ಯುವಕರು ಬಂದಿದ್ದರು, ಅವರು ಜಲ್ಸ ಆರಂಭವಾಗುವುದಕ್ಕೆ ಮುಂಚೆಯೂ ಜಲ್ಸದ ಸಮಯದಲ್ಲೂ ಸಹಾಯ ಮಾಡಿದ್ದರು. ಅದೇ ರೀತಿಯಲ್ಲಿ ಜಲ್ಸದ ನಂತರ ವೈಂಡಪ್  ಮಾಡುವುದರಲ್ಲೂ ಸಹಾಯ ಮಾಡಿದರು, ಅಲ್ಲಾಹನು ಅವರೆಲ್ಲರಿಗೂ ಪ್ರತಿಫಲ ನೀಡಲಿ.

(ಒಂದು ಹದೀಸ್ ಖುದ್‌ಸಿಯ ಬೆಳಕಿನಲ್ಲಿ, ಹುಝೂರ್ ಹೇಳಿದರು:) ಅಲ್ಲಾಹನು ತನ್ನ ಸಲುವಾಗಿ ಮಾಡಿದ ತನ್ನ ಸೇವಕರ ಕಾರ್ಯಗಳಿಗೆ ಬಹಳ ಹೆಚ್ಚು ಬೆಲೆ ನೀಡುತ್ತಾನೆ. ಸಂಪೂರ್ಣ ಕೃತಜ್ಞತೆಯ ವಾತಾವರಣ ರೂಪುಗೊಳ್ಳಲಿಕ್ಕೆ ಮತ್ತು ಎಲ್ಲೆಡೆ ಕೃತಜ್ಞತೆಯ ಸ್ಥಿತಿ ಉಂಟಾಗಲಿಕ್ಕಾಗಿ ನಾವು ಅವನಿಗೆ ಕೃತಜ್ಞತೆ ಸಲ್ಲಿಸಬೇಕೆಂದೂ ಅಲ್ಲಾಹನು ಬಯಸುತ್ತಾನೆ. ಈ ವಿಷಯವನ್ನು ನಾವು ಯಾವಾಗಲೂ ನೆನಪಿನಲ್ಲಿಡಬೇಕು.

(ಹುಝೂರ್ ಹೇಳಿದರು:) ಇಲ್ಲಿಗೆ ಬಂದ ಅತಿಥಿಗಳ ಅನಿಸಿಕೆಗಳು ನನಗೆ ಲಭಿಸಿವೆ. ಅನೇಕರು ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸುತ್ತಾ ಹೀಗೆ ಹೇಳಿರುವರು: ನೀವು ಏನು ನೌಕರಿ ಮಾಡುತ್ತಿದ್ದೀರಿ ಎಂದು ನಾವು ಡ್ಯೂಟಿ ಮಾಡುವ ಅನೇಕರೊಡನೆ ಕೇಳಿದೆವು. ಅವರು ಕೆಲಸ ಮಾಡುತ್ತಿದ್ದ ರೀತಿಯಿಂದ ಬಹುಶಃ ಅವರು ಕೂಲಿ ಕೆಲಸಗಾರರು ಎಂದು ನಾವು ಭಾವಿಸಿದೆವು, ಆದರೆ ಒಬ್ಬರು ನಾನು ಒಂದು ಸಂಸ್ಥೆಯಲ್ಲಿ ಅಧಿಕಾರಿಯಾಗಿದ್ದೇನೆ ಎಂದು ಹೇಳಿದರು, ಮತ್ತೊಬ್ಬರು ನಾನು ಟೀಚರ್ ಆಗಿದ್ದೇನೆ ಎಂದು ಹೇಳಿದರು, ಒಬ್ಬರು ನಾನು ಪಿಎಚ್‌ಡಿ ವಿದ್ಯಾರ್ಥಿ ಎಂದು ಹೇಳಿದರು, ಮತೊಬ್ಬರು ನಾನು ಪಿಎಚ್‌ಡಿ ಪದವೀಧರ ಎಂದು ಹೇಳಿದರು. ಹೀಗೆ ಹಝ್ರತ್ ಮಸೀಹ್ ಮೌಊದ್[ಅ]ರ ಅತಿಥಿಗಳ ಸೇವೆಗಾಗಿ ಮತ್ತು ಅಲ್ಲಾಹನ ಅನುಗ್ರಹವನ್ನು ಪಡೆಯಲಿಕ್ಕಾಗಿ ತಮ್ಮನ್ನು ಅರ್ಪಿಸಿಕೊಂಡವರು ಇದ್ದಾರೆ.

ಜಮಾಅತಿನೊಂದಿಗೆ ಅಲ್ಪ ಸ್ವಲ್ಪ ಪರಿಚಯ ಹೊಂದಿರುವ ಅನ್ಯರು ಸಹ ವಿವಿಧ ದೇಶಗಳಿಂದ ಬರುತ್ತಾರೆ. ಅಹ್ಮದಿಯರು ತಮ್ಮ ಕುರಿತು ಹೇಳುವಂತೆ ನಿಜವಾಗಿಯೂ ಆಗಿರುವರೋ ಎಂದು ನೋಡಲಿಕ್ಕಾಗಿ ಅವರು ಬರುತ್ತಾರೆ. ಅವರು ವಿವಿಧ ವೃತ್ತಿಗಳಿಂದ ಬಂದ ಈ ಸ್ವಯಂ ಸೇವಕರು, ಸಾಮಾನ್ಯ ಕಾರ್ಮಿಕರಂತೆ ಕೆಲಸ ಮಾಡುವುದನ್ನು ಕಾಣುವಾಗ, ಅದು ಅವರ ಮೇಲೆ ಪ್ರಭಾವ ಬೀರುತ್ತದೆ, ಇದು ಒಂದು ಮೌನವಾದ ತಬ್ಲೀಗ್ ಆಗಿದೆ. ಈ ಮೂಲಕ ಹೊಸದಾಗಿ ಜಮಾಅತಿಗೆ ಸೇರಿಕೊಂಡವರಿಗೂ ಅಥವಾ ಮೊದಲ ಬಾರಿಗೆ ಇಲ್ಲಿಗೆ ಬಂದವರಿಗೂ ಪ್ರೋತ್ಸಾಹ ಲಭಿಸುತ್ತದೆ. ಅವರನ್ನು ಎಷ್ಟು ಗೌರವ ಮತ್ತು ಸೌಹಾರ್ದದಿಂದ ಸತ್ಕರಿಸಲಾಗುತ್ತದೆ, ಇಲ್ಲಿನ ಜನರು ಅವರೊಂದಿಗೆ ಹೇಗೆ ವರ್ತಿಸುತ್ತಾರೆ ಎಂದು ಅವರು ನೋಡುತ್ತಾರೆ, ಇದು ಬಹಳ ಮುಖ್ಯವಾದ ವಿಷಯವಾಗಿದೆ ಮತ್ತು ಇದಕ್ಕಾಗಿ ನಾವೆಲ್ಲರೂ ಅಲ್ಲಾಹನಿಗೆ ಕೃತಜ್ಞರಾಗಿರಬೇಕು.

(ಈ ಸಂದರ್ಭದಲ್ಲಿ, ವಿವಿಧ ದೇಶಗಳಿಂದ ಬಂದ ಅಹ್ಮದಿಯೇತರ ಅತಿಥಿಗಳು ಮತ್ತು ಕೆಲವು ನವ ಅಹ್ಮದಿಯರು ಜಲ್ಸ ಸಾಲಾನದಲ್ಲಿ ಭಾಗವಹಿಸಿದ್ದನ್ನು ಹುಝೂರ್ ಪ್ರಸ್ತಾಪಿಸಿದರು ಮತ್ತು ಅಲ್ಲಾಹನ ಕೃಪೆಯಿಂದ ಜಲ್ಸದ ಅನುಗ್ರಹಗಳ ಪರಿಣಾಮವಾಗಿ ಅವರ ಮೇಲೆ ಉಂಟಾದ ಸಕಾರಾತ್ಮಕ ಪರಿಣಾಮಗಳನ್ನು ವಿವರಿಸುತ್ತಾ ಅನೇಕ ವಿಶ್ವಾಸವರ್ಧಕ ಘಟನೆಗಳನ್ನು ವಿವರಿಸಿದರು.)

ಐರ್ಲೆಂಡ್ ಪೊಲೀಸ್ ಪಡೆಯ ಸಹಾಯಕ ಕಮಿಷನರ್ ರಾಡರಿಕ್ ಹೀಗೆ ಹೇಳುತ್ತಾರೆ: 'ಜಲ್ಸದ ದಿನಗಳಲ್ಲಿ ನಾನು ಕಂಡದ್ದು ನಿಜಕ್ಕೂ ಒಂದು ಆದರ್ಶಪೂರ್ಣ ಸಂಗತಿಯಾಗಿತ್ತು. ವ್ಯವಸ್ಥೆ ಮತ್ತು ಶಿಸ್ತಿನ ಅಮೂಲ್ಯ ಪಾಠವಾಗಿತ್ತು. ಹತ್ತು ಸಾವಿರ ಸ್ವಯಂಸೇವಕರ ಉಪಸ್ಥಿತಿ ಒಂದು ಅದ್ಭುತ ಪವಾಡವಾಗಿತ್ತು. ಪ್ರತಿಯೊಬ್ಬರೂ ಅಸಾಧಾರಣ ಬದ್ಧತೆಯೊಂದಿಗೆ ಹೆಗಲಿಗೆ ಹೆಗಲು ಕೊಟ್ಟು ಸೇವೆ ಸಲ್ಲಿಸಿದರು.'

ಮಾನವ ಹಕ್ಕುಗಳ ಸಂಸ್ಥೆ ಎಚ್. ಆರ್. ಡಬ್ಲ್ಯೂ. ಎಫ್.ನ ಪ್ರತಿನಿಧಿಯಾಗಿರುವ ಬೆಲ್ಜಿಯಂನ ಒಬ್ಬ ಪ್ರತಿನಿಧಿ ಹೀಗೆ ಹೇಳುತ್ತಾರೆ: 'ಇಷ್ಟು ದೊಡ್ಡ ಪ್ರಮಾಣದಲ್ಲಿ, ಸಾವಿರಾರು ಜನರು ಹಲವಾರು ದಿನಗಳವರೆಗೆ ಭಾಗವಹಿಸುವ ಒಂದು ಜಲ್ಸವನ್ನು ಆಯೋಜಿಸುವುದು ಖಂಡಿತವಾಗಿಯೂ ಅಸಾಧಾರಣ ಸಾಧನೆಯಾಗಿದೆ. ಸಂಘಟನಾತ್ಮಕ ಕೌಶಲ್ಯ ಮಾತ್ರವಲ್ಲ, ಅದರ ಹಿಂದಿನ ನೈತಿಕ ಅಡಿಪಾಯ ಕೂಡ ನನಗೆ ಪ್ರಭಾವಶಾಲಿಯಾಗಿ ತೋರಿತು.'

ಬಲ್ಗೇರಿಯಾದಿಂದ ಬಂದ ಒಬ್ಬ ನವ ಅಹ್ಮದಿ ಹೀಗೆ ಹೇಳುತ್ತಾರೆ: 'ಈ ಅನುಗ್ರಹೀತ ದಿನಗಳಲ್ಲಿ ನಾನು ಅಸಾಧಾರಣ ಆಧ್ಯಾತ್ಮಿಕ ವಾತಾವರಣವನ್ನು ಅನುಭವಿಸಿದೆ ಮತ್ತು ಅದರ ಭಾಗವಾಗಲು ಸೌಭಾಗ್ಯ ದೊರೆಯಿತು. ನನ್ನ ಅನುಭವವು ಅತ್ಯಂತ ವೈಭವಪೂರ್ಣ ಮತ್ತು ಪ್ರಭಾವಶಾಲಿಯಾಗಿತ್ತು. ಏಕೆಂದರೆ ಅತಿಥಿಗಳ ಸೌಕರ್ಯ ಮತ್ತು ಆರಾಮವನ್ನು ಬಹಳ ಸೂಕ್ಷ್ಮವಾಗಿ ನೋಡಿಕೊಳ್ಳಲಾಯಿತು.' ಜಾರ್ಜಿಯಾದಿಂದ ಬಂದ ಅತಿಥಿಯೊಬ್ಬರು ಹೀಗೆ ಹೇಳುತ್ತಾರೆ: 'ಜಲ್ಸದ ಶಾಂತಿಯುತ ವಾತಾವರಣ, ಭಾಷಣಗಳು ಮತ್ತು ಖಲೀಫತುಲ್ ಮಸೀಹರ ಭಾಷಣಗಳು ಆಧ್ಯಾತ್ಮಿಕತೆಯನ್ನು ವರ್ಧಿಸಲು ಬಹಳ ದೊಡ್ಡ ಪಾತ್ರವಹಿಸುತ್ತವೆ.' ಸ್ವೀಡನ್‌ನಿಂದ ಬಂದ

ಅರಬ್ ಮಹಿಳೆಯೊಬ್ಬರು ಹೀಗೆ ಹೇಳುತ್ತಾರೆ: 'ವಾರ್ಷಿಕ ಜಲ್ಸವು ಒಂದು ದೊಡ್ಡ ಮನೆಯಂತೆ, ಅದು ಇಡೀ ಕುಟುಂಬವನ್ನು ತನ್ನೊಳಗೆ ಸೇರಿಸಿಕೊಳ್ಳುತ್ತದೆ.'

(ವಿವಿಧ ವಿಶ್ವಾಸವರ್ಧಕ ಅನಿಸಿಕೆಗಳನ್ನು ವಿವರಿಸಿದ ನಂತರ, ಹುಝೂರ್ ಹೇಳಿದರು:) ಅಲ್ಲಾಹನು ಭಾಗವಹಿಸಿದ ಎಲ್ಲ ಅತಿಥಿಗಳ ಹೃದಯಗಳನ್ನು ಮತ್ತಷ್ಟು ತೆರೆಯಲಿ ಹಾಗೂ ಅವರು ಅಹ್ಮದಿಯ್ಯತ್ ಮತ್ತು ನಿಜವಾದ ಇಸ್ಲಾಮನ್ನು ಅರ್ಥಮಾಡಿಕೊಳ್ಳುವವರಾಗಲಿ, ಕಾಲಘಟ್ಟದ ಇಮಾಮನ್ನು ನಂಬುವವರಾಗಲಿ. ನವ ಅಹ್ಮದಿಯರ ನಂಬಿಕೆ ಮತ್ತು ನಿಷ್ಠೆ ವರ್ಧಿಸಲಿ. ಅದೇ ರೀತಿ, ಪ್ರತಿಯೊಬ್ಬ ಅಹ್ಮದಿಗೂ ಜಲ್ಸದ ಕಾರ್ಯಕ್ರಮಗಳಲ್ಲಿ ತಾವು ನೋಡಿದ ಮತ್ತು ಆಲಿಸಿದ ಸಂಗತಿಗಳ ಪ್ರಕಾರ ನಡೆಯಲು, ತಮ್ಮ ಜೀವನದ ಭಾಗವಾಗಿಸಿಕೊಳ್ಳಲು, ದೀನಿಗೆ ಲೌಕಿಕತೆಗಿಂತ ಆದ್ಯತೆ ನೀಡುವಂತಾಗಲು ಮತ್ತು ಈ ಆವೇಶ ಯಾವಾಗಲೂ ನೆಲೆನಿಲ್ಲುವಂತಾಗಲು ಅಲ್ಲಾಹನು ಸೌಭಾಗ್ಯ ನೀಡಲಿ. ಜಲ್ಸದ ಅನುಗ್ರಹಗಳಿಂದ ಪ್ರತಿಯೊಬ್ಬ ಅಹ್ಮದಿ ಯಾವಾಗಲೂ ಪಾಲು ಪಡೆಯುವಂತಾಗಲಿ ಹಾಗೂ ತಮ್ಮ ಆತ್ಮ ಮತ್ತು ತಮ್ಮ ಪರಿಸರವನ್ನು ಸುಧಾರಿಸಲು ಸಹ ಪೂರ್ಣ ಪ್ರಯತ್ನ ಮಾಡುವವರಾಗಲಿ.

ಹುಝೂರ್ ಪತ್ರಿಕಾ ವರದಿಗಳನ್ನು ಸಂಕ್ಷಿಪ್ತವಾಗಿ ತಿಳಿಸಿದರು. ಜಮಾಅತಿನ ಪ್ರೆಸ್ ಆಂಡ್ ಮೀಡಿಯಾ ವಿಭಾಗ ಮತ್ತು ಅದರ ಅಡಿಯಲ್ಲಿರುವ ಸುಮಾರು 49 ವೆಬ್‌ಸೈಟ್‌ಗಳು, ಪ್ರಿಂಟ್ ಮೀಡಿಯಾ, ವೃತ್ತಪತ್ರಿಕೆಗಳಲ್ಲಿ 17 ಲೇಖನಗಳು, ರೇಡಿಯೋದಲ್ಲಿ 25 ಕಾರ್ಯಕ್ರಮಗಳು, ಟಿವಿ ಮತ್ತು ಸಾಮಾಜಿಕ ಮಾಧ್ಯಮಗಳ ಮೂಲಕ, ಅಲ್ಲಾಹನ ಕೃಪೆಯಿಂದ, ಎಲ್ಲವನ್ನೂ ಒಟ್ಟಾಗಿ ಸೇರಿಸಿದರೆ 100 ಮಿಲಿಯನ್ ಜನರಿಗೆ ಈ ಸುದ್ದಿ ತಲುಪಿತು.

ಎಂ.ಟಿ.ಎ. ಆಫ್ರಿಕಾದ ವಿವಿಧ ಚಾನೆಲ್‌ಗಳಲ್ಲಿ ಜಲ್ಸ ಸಾಲಾನದ ನೇರಪ್ರಸಾರವನ್ನು ವೀಕ್ಷಿಸಿದ ನಂತರ 50ಕ್ಕೂ ಹೆಚ್ಚು ಜನರು ಬೈಅತ್ ಸಹ ಮಾಡಿದರು. 22 ರಾಷ್ಟ್ರೀಯ ಮತ್ತು ಪ್ರಾದೇಶಿಕ ಟಿವಿ ಚಾನೆಲ್‌ಗಳಲ್ಲಿ ಜಲ್ಸ ಸಾಲಾನ ಕಾರ್ಯಕ್ರಮಗಳ 304 ಗಂಟೆಗಳ ಪ್ರಸಾರವಾಯಿತು ಮತ್ತು 65 ಮಿಲಿಯನ್ ಜನರಿಗೆ ಸಂದೇಶ ತಲುಪಿತು. ಜಲ್ಸದ ಕುರಿತು ರೇಡಿಯೋ ಸ್ಟೇಷನ್‌ಗಳಲ್ಲಿ 91 ವಿವಿಧ ವರದಿಗಳು ಪ್ರಸಾರವಾದವು, ಈ ಮೂಲಕ 16 ಮಿಲಿಯನ್ ಜನರಿಗೆ ಸಂದೇಶ ತಲುಪಿತು. ಮೀಡಿಯಾ ಔಟ್‌ಲೆಟ್‌ಗಳು ಇತರ ವಿವಿಧ ಮೂಲಗಳಿಂದ 47 ಸುದ್ದಿಗಳು ಪ್ರಸಾರವಾದವು ಮತ್ತು ಈ ಮೂಲಕ 150 ಮಿಲಿಯನ್ ಜನರಿಗೆ ಸಂದೇಶ ತಲುಪಿತು.

(ಖುತ್ಬದ ಕೊನೆಯಲ್ಲಿ ಹುಝೂರ್ ಪೆಲಸ್ತೀನಿನ ಗಾಝ್ಝದ ಶಹೀದ್ ಅಬ್ದುಲ್ ಕರೀಮ್ ಜಮಾಲ್ ಜುದಾರ ಬಗ್ಗೆ ಪ್ರಸ್ತಾಪಿಸಿ ಅವರ ಜನಾಝ ಗ್ಹಾಯಿಬ್ ನಿರ್ವಹಿಸುವುದಾಗಿ ಹೇಳಿದರು ಮತ್ತು ಅವರ ಮಗ್‌ಫಿರತ್ ಮತ್ತು ಉನ್ನತ ಪದವಿಗಳಿಗಾಗಿ ದುಆ ಮಾಡಿದರು.)

*****

اَلْحَمْدُ لِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَا هَادِيَ لَهٗ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَآءِ ذِي الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.

***Friday Sermon delivered by Hadrath Khaleefatul Masih Al Khamis*** *(atba)*
At, ***'Masjid Mubarak',*** *Islamabad, Tilford,* U.K. On 01-08-2025
**Summarized by** *Majlis Ansarullah Bharat*
***Kannada Translation****:* Moulavi Inamullah for Kannada Desk, Qadian
***Reviewed by****:* M.P Ibrahim | ***Layout****:* Basheer K.P. Manjeshwar
***Published By****:* Kannada Isha'at Team for Nazarath Nashr-O-Isha'ath, Qadian
***Email***: *khutuba.kannada@gmail.com*
**You can find all the Sermons archived at**: www.alislam.org/friday-sermon